ಕರ್ನಾಟಕ ವಿಧಾನ ಸಭೆ
KARNATAKA LEGISLATIVE ASSEMBLY

ಶುಕ್ರವಾರ ದಿನಾಂಕ ೨೯ನೇ ಜನವರಿ ೧೯೮೮ ಮಾಘ ೯, ೧೯೦೯,

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಿಗ್ಗೆ ೯-೦೫ ಗಂಟೆಗೆ ಸಮಾವೇಶಗೊಂಡಿತು.

[ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಅವರು ಪೀಠವನ್ನು ಅಲಂಕರಿಸಿದರು].

ಅಧ್ಯಕ್ಷರು.—ಚುಕ್ಕೆ ಗುರುತಿನ ಪ್ರಶ್ನೆಗಳು, ಮೊದಲನೆಯದಾಗಿ ಶ್ರೀ ಬಾಬು ರೆಡ್ಡಿ ತುಂಗಳ್ ರವರಂ ತಮ್ಮ ಪ್ರಶ್ನೆಗೆ ಅನಂತರ ಉತ್ತರವನ್ನು ಕಂದಾಯ ಮಂತ್ರಿಗಳು ಕೊಡುತ್ತಾರೆ. ಅವರು ಈಗ ಬಂದಿಲ್ಲ.

ಶ್ರೀಮತಿ ವಂನೋರಮ ವೆಂಧ್ವರಾಜ್	ಗೈರು ಹಾಜರು
ಶ್ರೀ ಬಿ.. ಲಕ್ಕಪ್ಪ	ಗೈರು ಹಾಜರು
ಶ್ರೀ ಕೆ. ಕಂಶಾಲ	ಗೈರು ಹಾಜರು
ಶ್ರೀ ಬಿ. ಗುರುಪ್ರಸಾದ್	ಆ ಮೇಲೆ ತೆಗೆದುಕೊಳ್ಳಲಾಗುವುದು
ಶ್ರೀ ಎಂ. ಶಿವಣ್ಣ	ಗೈರು ಹಾಜರು
ಶ್ರೀ ಕೆ. ಎಚ್. ಶ್ರೀನಿವಾಸ್	ಗೈರು ಹಾಜರು
ಶ್ರೀ ಎಂ. ಎಸ್. ಪಾಟೀಲರ ಪರವಾಗಿ ಶ್ರೀ ಭೂಪತಿ	ಆ ಮೇಲೆ ತೆಗೆದುಕೊಳ್ಳಲಾಗುವುದು
ಶ್ರೀ ಆರ್. ವೆಂಕಟರಾಮಯ್ಯ	ಗೈರು ಹಾಜರು
ಶ್ರೀ ಬಿ. ಬಸವಲಿಂಗಪ್ಪ	ಗೈರು ಹಾಜರು
ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್	ಗೈರು ಹಾಜರು
ಶ್ರೀ ವೀರಕಂಮಾರ್ ಪಾಟೀಲ್	ಮುಂದಕ್ಕೆ ಹೋಗಿದೆ
ಶ್ರೀ ಎಂ. ಎಸ್. ಕೃಷ್ಣನ್	ಮುಂದಕ್ಕೆ ಹೋಗಿದೆ
ಶ್ರೀ ಕೆ. ಎಚ್. ಪಾಟೀಲ್	ಗೈರು ಹಾಜರು

ಶ್ರೀ ಬಿ. ಎಸ್. ಯಡಿಯೂರಪ್ಪನವರು ತಮ್ಮ ಪ್ರಶ್ನೆ ಕ್ರಮಾಂಕ ೧೧೭(೧೧೧) ಕೇಳಿ.

ಕೈಗಾ ಅಣು ವಿದ್ಯುತ್ ಯೋಜನೆಯಂಡಿಯಲ್ಲಿ ಮರು ವಸತಿ.

೪೮೪. ಶ್ರೀ ಆರ್. ಎಸ್. ನಾಯ್ಕ (ಭಟ್ಕಳ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಕೈಗಾ ಅಣು ವಿದ್ಯುತ್ ಯೋಜನೆಯಂಡಿಯಲ್ಲಿ ಎಷ್ಟು ಎಕರೆ ಖಾಸಗಿ ಭೂಮಿಯನ್ನು ಸರ್ಕಾರದವರು ವಹಿಸಿಕೊಂಡಿದ್ದಾರೆ ?

(ಆ) ಇದರಿಂದ ಎಷ್ಟು ಕುಟುಂಬಗಳು ನಿರಾಶ್ರಿತವಾಗುತ್ತಿದೆ. ಹಾಗೂ ಅಂತಹವರಿಗೆ ಪುನರ್ ವ್ಯವಸ್ಥೆ ಮಾಡಿರುವ ಅನುಕೂಲತೆಗಳೇನು ?

(ಇ) ಈಗಾಗಲೇ ಪುನರ್ ವಸತಿ ಬಗ್ಗೆ ಎಷ್ಟು ಹಣ ಖರ್ಚಾಗಿರುತ್ತದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

		ಎ—ಗುಂ—ಆ
(ಅ) (೧)	ಕೈಗಾ ಅಣು ಸ್ಥಾವರ ವಶಪಡಿಸಿಕೊಂಡ ಖಾಸಗಿ ಜಮೀನು	೪೧೪—೦೨—೮
(೨)	ವಸತಿ ಗೃಹಗಳಿಗೆ (ಟೌನ್‌ಶಿಪ್) ವಶಪಡಿಸಿಕೊಂಡ ಖಾಸಗಿ ಜಮೀನು	೨೫೮—೦೩—೦
	ಒಟ್ಟು	೬೭೨—೮೫—೮

(ಆ) ೧೨೧ ಕುಟುಂಬಗಳು. ಎಲ್ಲಾ ಕುಟುಂಬಗಳು ಮರು ವಸತಿ ಅನುದಾನ ಕೇಳಿರುತ್ತವೆ. ಈ ಅನುದಾನವನ್ನು ಕುಟುಂಬಗಳನ್ನು ಸ್ಥಳಾಂತರಿಸುವಾಗ ಪಾವತಿ ಮಾಡಲಾಗುತ್ತದೆ, ಈ ಕುಟುಂಬಗಳಿಗೆ ನಿವೇಶನ ಪಡೆಯುವ ಬಗ್ಗೆ ಪುನರ್ವಸತಿ ಸಮಿತಿಯು ನಿರ್ಧರಿಸಿದ್ದು ನಿವೇಶನಗಳನ್ನು ಕಾರವಾರ ತಾಲ್ಲೂಕು ಮಲ್ಲಾಪುರದ ಬಳಿ ಕೊಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

(ಇ) ಈ ಬಗ್ಗೆ ಇನ್ನೂ ಹಣ ಖರ್ಚು ಮಾಡಿರುವುದಿಲ್ಲ.

ತಾಳಿ ಭಾಗ್ಯ ಯೋಜನೆ ಕಳೆದ ಎರಡು ವರ್ಷಗಳ ಪ್ರಗತಿ ಬಗ್ಗೆ.

೧೧೧. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾಳಿ ಭಾಗ್ಯ ಯೋಜನೆ ಪ್ರಾರಂಭವಾದ ನಂತರ ಈವರೆಗೆ ಪ್ರತಿ ವರ್ಷ ಜಿಲ್ಲಾವಾರು ಪ್ರಯೋಜನ ಪಡೆದವರ ಒಟ್ಟು ಸಂಖ್ಯೆ ಎಷ್ಟು ಹಾಗೂ ಅದಕ್ಕಾಗಿ ಖರ್ಚಾದ ಹಣವೆಷ್ಟು ?

ಆ) ಈ ಯೋಜನೆಯಲ್ಲಿ ದುರುಪಯೋಗವಾಗಿರುವುದು ಸರ್ಕಾರದವರ ಗಮನಕ್ಕೆ ದೂರು ಗಳೇನಾದರೂ ಬಂದಿವೆಯೇ ?

ಶ್ರೀ ಬಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ಫಲಾನುಭವಿಗಳ ಸಂಖ್ಯೆ ೭,೫೬೪ ಮತ್ತು ೨೮,೬೫,೯೪೦.೮೫ ರೂ.ಗಳು ಖರ್ಚಾಗಿದೆ. ಜಿಲ್ಲಾವಾರು ಮಾಹಿತಿ ಅನುಬಂಧ 'ಅ' ನಲ್ಲಿ ವಿವರಗಳನ್ನು ಕೊಡಲಾಗಿದೆ.

ಆ) ಸರ್ಕಾರಕ್ಕೆ ದೂರುಗಳೇನು ಬಂದಿರುವುದಿಲ್ಲ.